# ಹಾಪ್‌ಕಾಮ್ಸ್, ಲಾಲ್‌ಬಾಗ್, ಬೆಂಗಳೂರು-04

ಸಂಖ್ಯೆ:ಹೆಚ್. ಸಿ. ಎಸ್:ಕಾ. ನಿ(ಆಡಳಿತ)/ಸಿಬ್ಬAದಿ/ವಿನಿ10/1417/2021-22

ದಿನಾಂಕ: 24. 01. 2022

**<u>ಅಧಿಸೂಚನೆ</u>**

ವಿಷಯ: ಸಂಸ್ಥೆಯ ತಾತ್ಕಾಲಿಕ ಸಾಮಾನ್ಯ ಜೇಷ್ಠತಾ ಪಟ್ಟಿ, ದಿನಾಂಕ: 01. 01. 2022ಕ್ಕೆ ಇದ್ದಂತೆ

ಉಲ್ಲೇಖ:
1 ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್. ಆರ್. ಎಸ್ 2018 ಬೆಂಗಳೂರು ದಿನಾಂಕ: 15ನೇ ಮೇ 2019.
2 ಸಂಖ್ಯೆ: ತೋಇ:ಆಸಿವಿನಿ1;13;2019-20 ದಿನಾಂಕ: 14. 06. 2019
3 ಹೆಚ್. ಸಿ. ಎಸ್:ಕಾ. ನಿ(ಆಡಳಿತ)/ಸಿಬ್ಬಂದಿ/2374/2017-18, ದಿನಾಂಕ: 13. 01. 2018.

*******

ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯ ನೌಕರರುಗಳ ಜೇಷ್ಟತಾ ಪಟ್ಟಿಗೆ ಸಂಬಂಧಿಸಿದಂತೆ ಸಂಸ್ಥೆಯಲ್ಲಿ ಕಾರ್ಯನಿರ್ವಸುತ್ತಿರುವ ವೃಂದವಾರು ತಾತ್ಕಾಲಿಕ ಜೇಷ್ಟತಾ ಪಟ್ಟಿ ಸಿದ್ದಪಡಿಸಿದೆ.
ಉಲ್ಲೇಖ(1) ಮತ್ತು (2)ರ ಆದೇಶ/ಸುತ್ತೋಲೆಯ ಮಾರ್ಗಸೂಚನೆಯನ್ವಯ ದಿನಾಂಕ 16. 04. 2018 ರಂದು ಮೀಸಲಾತಿ ಆಧಾರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಿಂಬಡ್ತಿಗೊಳಿಸಲಾಗಿದ್ದ ನೌಕರರನ್ನು ಯಥಾಸ್ಥಾನದಲ್ಲಿ ಪುನರ್ ಸ್ಥಾಪಿಸಿ ವೃಂದವಾರು ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಸಿದ್ದಪಡಿಸಿದೆ.

1. ಸಹಕಾರ ಸಂಘಗಳ ನಿಬಂಧಕರು/ಮಾನ್ಯ ನಿರ್ದೇಶಕರು ತೋಟಗಾರಿಕೆ ಇಲಾಖೆ ರವರು ಕಾಲಕಾಲಕ್ಕೆ ನೀಡಿರುವ ಸೂಚನೆ ಹಾಗೂ ಮಾರ್ಗಸೂಚಿಯನ್ನು ಅನುಸರಿಸಲಾಗಿದೆ.
2. ನೌಕರರು ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ದಿನಾಂಕ ಹಾಗೂ ಖಾಯಂಗೊಂಡ ದಿನಾಂಕವನ್ನು ಗುರುತಿಸಿ ಇದರ ಆಧಾರದ ಮೇಲೆ ವೃಂದವಾರು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲಾಗಿದೆ.
3. ನೌಕರರು ಕಛೇರಿಗೆ ನೀಡಿರುವ ದಾಖಲಾತಿಗಳು ಹಾಗೂ ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ತಾತ್ಕಲಿಕ ಜೇಷ್ಟತಾ ಪಟ್ಟಿಯನ್ನು ಸಿದ್ದಪಡಿಸಲಾಗಿದೆ.
4. ಸದರಿ ಜೇಷ್ಠತಾ ಪಟ್ಟಿಯಲ್ಲಿನ ನ್ಯೂನತೆ/ಆಕ್ಷೇಪಣೆಗಳಿದ್ದಲ್ಲಿ ದಾಖಲಾತಿಗಳ ಸಮೇತ ಪ್ರಕಟಿತ ೧೫ ದಿನಗಳೊಳಗಾಗಿ ಸಲ್ಲಿಸಲು ಸೂಚಿಸಿದೆ.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:-

1. ಸೂಚನಾ ಫಲಕದ ಮುಲಕ ಸಂಸ್ಥೆಯ ಎಲ್ಲಾ ನೌಕರರುಗಳಿಗೆ
2. ಕಾರ್ಯನಿರ್ವಾಹಕರು, ಕೋಲಾರ ಶಾಖೆ ಇವರ ಮಾಹಿತಿಗೆ.
3. ಕಛೇರಿ ಪ್ರತಿ.
4. ಸಂಬಂಧಿಸಿದ ಕಡತಕ್ಕೆ.